**ಪತ್ರಿಕಾ ಪ್ರಕಟಣೆ**

**ವಿಜಯಪುರ**
**ದಿನಾಂಕ: 18.06.2021.**

**1] ನಿಡಗುಂದಿ ಪೊಲೀಸ ಠಾಣೆ ಗುನ್ನೆ ನಂ: 71/2021 ಕಲಂ: 279,304 (ಎ) ಐಪಿಸಿ**

ದಿನಾಂಕ 17.06.2021 ರಂದು 11:00 ಗಂಟೆಗೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಹಣಮಗೌಡ ತಂ ರಾಮನಗೌಡ ಬಿರಾದಾರ ಸಾ: ಹಂಗರಗಿ ತಾ: ಬ ಬಾಗೇವಾಡಿ ಮೋಟಾರ ಸೈಕಲ ನಂ: ಕೆಎ:28 ಇಎಮ್:8368 ನೇದ್ದರ ಚಾಲಕ ಈತನು ತಾನು ನಡೆಯಿಸುತ್ತಿದ್ದ ಮೋಟಾರ ಸೈಕಲ ನೇದ್ದರ ಹಿಂದೆ ಪಿರ್ಯಾದಿಯ ಹೆಂಡತಿ ಮಹಾದೇವಿ ವಯಾ–26 ವರ್ಷ ಇವಳನ್ನು ಕೂಡಿಸಿಕೊಂಡು ನಿಡಗುಂದಿಯ ಕಡೆಯಿಂದ ಮುದ್ದೇಬಿಹಾಳ ಕಡೆಗೆ ಹೋಗುವ ರಸ್ತೆಯ ಮೇಲೆ ಮುದ್ದಾಪೂರ ಕ್ರಾಸ್ ಸಮೀಪ ಕೆನಾಲ ಹತ್ತಿರ ಬಹಳ ಜೋರಾಗಿ, ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಯಿಸಿಕೊಂಡು ಹೋಗಿ ಮೋಟಾರ ಸೈಕಲ ಚಾಲನೆಯ ನಿಯಂತ್ರಣ ತಪ್ಪಿ ಒಮ್ಮಲೇ ಕುಣಿಚಿಗೆ ಹಾಯಿಸಿ ಮೋಟಾರ ಸೈಕಲ ಹಿಂದೆ ಕುಳಿತ ಪಿರ್ಯಾದಿಯ ಹೆಂಡತಿ ಮಹಾದೇವಿ ಇವಳನ್ನು ಕೆಳಗೆ ಕೆಡವಿ ಅಪಘಾತ ಮಾಡಿ ತಲೆಗೆ ಬಾರೀ ಗಾಯಪೆಟ್ಟು ಪಡಿಸಿ ಸ್ಥಳದಲ್ಲಿಯೇ ಮರಣ ಪಡಿಸಿದ ಅಪರಾಧ. ಈ ಬಗ್ಗೆ ಮಹಾಂತೇಶ ಸಂಗನಗೌಡ ಗಾಲಿ ಸಾ: ಡಮನಾಳ ಹಾ:ವ: ಹಂಗರಗಿ ತಾ: ಬ ಬಾಗೇವಾಡಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 17.06.2021 ರಂದು ನಿಡಗುಂದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ತಾಳಿಕೋಟಿ ಪೊಲೀಸ ಠಾಣೆ ಗುನ್ನಾ. ನಂ: 108/2021 ಕಲಂ: 279. 304(ಎ) ಐ.ಪಿ.ಸಿ.**

ದಿನಾಂಕ 15.06.2021 ರಂದು 08.30 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ ಬಸವರಾಜ ನೀಲಪ್ಪ ಮಾದರ. ಸಾ॥ ಹೊಸೂರ. ತಾ॥ ಶಿಗ್ಗಾವಿ ಮೋಟರ ಸೈಕಲ್ ನಂ: ಕೆಎ:27. ಈಬಿ:7935. ನೇದರ ಚಾಲಕ ಈತನು ಪಿರ್ಯಾದಿ ಹೆಂಡತಿಯಾದ ಗೌರಮ್ಮ ಮಹೇಶ ದೇಸಾಯಿ. ಸಾ॥ ಹೊಳೆಆಲೂರ ತಾ॥ ರೋಣ ಜಿಲ್ಲೆ ಗದಗ ಇವಳಿಗೆ ತನ್ನ ಮೋಟರ ಸೈಕಲ್ ನಂ:ಕೆಎ:27 ಈಬಿ:7935. ನೇದರ ಮೇಲೆ ಕೂಡಿಸಿಕೊಂಡು ಮುದ್ದೇಬಿಹಾಳದಿಂದ ತಾಳಿಕೋಟಿಗೆ ಕರೆದುಕೊಂಡು ಹೋಗುವಾಗ ಮೋಟರ ಸೈಕಲ್‌ನ್ನು ಜೋರಾಗಿ ಅಜಾಗೂರು ಕತೆಯಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡಿಸಿಕೊಂಡು ರಸ್ತೆ ಮೇಲೆ ಆ ಕಡೆ ಈ ಕಡೆ ನಡಿಸಿಕೊಂಡು ಹೋಗಿ ಮೂಕಿಹಾಳ ಹಡಗಿನಾಳ ರಸ್ತೆಯ ಮೂಕಿಹಾಳ ಗ್ರಾಮದಲ್ಲಿ ಇರುವ ಸರಕಾರಿ ಕನ್ನಡ ಶಾಲೆಯ ಹತ್ತಿರ ಸಾರ್ವಜನಿಕ ರಸ್ತೆಯ ಮೇಲೆ ಪಿರ್ಯಾದಿಯ ಹೆಂಡತಿಗೆ ಮೋಟರ ಸೈಕಲ್ ಮೇಲಿಂದ ಕೆಡವಿ 8.30 ಗಂಟೆಗೆ ತಲೆಗೆ ಬಾರಿಗಾಯ ಒಳಪೆಟ್ಟು ಪಡಿಸಿದ್ದು. ಗೌರಮ್ಮ ಇವಳಿಗೆ ಬಾಗಲಕೋಟಿ ಧನುಷ್ ಆಸ್ಪತ್ರೆಯಲ್ಲಿ ಉಪಚಾರ ಮಾಡಿಸುವಾಗ ದಿನಾಂಕ 16.06.2021 ರಮದು 21.15 ಗಂಟೆಗೆ ಉಪಚಾರ ಫಲಕಾರಿಯಾಗದೆ ಬಾಗಲಕೋಟಿ ಧನುಷ್ ಆಸ್ಪತ್ರೆಯಲ್ಲಿ ಮರಣ ಹೊಂದುವಂತೆ ಮಾಡಿದ ಅಪರಾಧ ಅಂತ ವಗ್ಯೆರ ವಿಷಯ ಪಿರ್ಯಾದಿಯಲ್ಲಿ ನಮೂದು ಇರುತ್ತದೆ. ಈ ಬಗ್ಗೆ ಮಹೇಶ ಮಹಾದೇವಪ್ಪ ದೇಸಾಯಿ. ಸಾ॥ ಹೊಳೆಆಲೂರ ತಾ॥ ರೋಣ ಜಿಲ್ಲೆ ಗದಗ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 17.06,2021 ರಂದು ತಾಳಿಕೋಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ತಿಕೋಟಾ ಪೊಲೀಸ ಠಾಣೆ ಗುನ್ನಾ. ನಂ: 95/2021 ಕಲಂ: ಹುಡುಗ ಕಾಣೆ**

ದಿನಾಂಕ 07.06.2021 ರಂದು 21.30 ಗಂಟೆ ಸುಮಾರಿಗೆ ಇದರಲ್ಲಿ ಕಾಣೆಯಾದ ಶಂಕರ ಮಲ್ಲಿಕಾರ್ಜುನ ಶೇಳೇನವರ ವಯಾ–22 ವರ್ಷ ಸಾ:–ಬಾಬಾನಗರ ಈತನು ಈತನು ಮನೆಯ ಹೊರಗಡೆ ಜೀಪ್ ಗಾಡಿಯಲ್ಲಿ ಮಲಗುತ್ತೆನೆ ಅಂತಾ ಹಾಸಿಗೆ ತಗೊಂಡು ಹೊದವನು ಎಲ್ಲಿಯೋ ಹೋಗಿ ಕಾಣೆಯಾಗಿರುತ್ತಾನೆ. ಈ ಬಗ್ಗೆ ಮಲ್ಲಿಕಾರ್ಜುನ ಲಕ್ಷ್ಮಣ ಶೇಳ್ಳೆನ್ನವರ ಸಾ॥ ಬಾಬಾನಗರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 17.06,2021 ರಂದು ತಿಕೋಟಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಮಹಿಳಾ ಪೊಲೀಸ ಠಾಣೆ ಗುನ್ನಾ. ನಂ: 63/2021 ಕಲಂ: ಮಹಿಳೆ ಕಾಣೆ.**

ದಿನಾಂಕ 15.06.2021 08.30 ಗಂಟೆಯಿಂದ 09.30 ಗಂಟೆಯ ನಡುವಿನ ಅವಧಿಯಲ್ಲಿ ಇದರಲ್ಲಿ ಕಾಣೆಯಾದ ಸ್ನೇಹಾ ರಾಜು ಗಾಯಕವಾಡ ವಯಾ: 19 ವರ್ಷ ಜಾತಿ: ಹಿಂದು ಮರಾಠ ಉದ್ಯೋಗ: ವ್ಯಾಸಂಗ ಸಾ॥ ಮರಾಠಿ ವಿಧ್ಯಾಲಯ ಹತ್ತಿರ ದರಬಾರಗಲ್ಲಿ ವಿಜಯಪುರ ಇವಳು ಹನುಮಾನ ಗುಡಿಗೆ ಹೋಗಿ ಬರುತ್ತೇನೆ ಅಂತಾ ಹೇಳಿ ಹೋದವಳು ವಾಪಸ್ ಮನೆಗೆ ಬಾರದೆ ಎಲ್ಲಿಗೋ ಹೋಗಿ ಕಾಣೆಯಾಗಿರುತ್ತಾರೆ. ಕಾರಣ ನನ್ನ ಮಗಳಿಗೆ ತಪಾಸಣೆ ಮಾಡಿಕೊಡಬೇಕಾಗಿ ವಿನಂತಿ ಅಂತಾ ವಗೈರೆ ಪಿರ್ಯಾಧಿಯಲ್ಲಿ ನಮೂದ ಅದೆ. ಈ ಬಗ್ಗೆ ರಾಜು ಯಶವಂತ ಗಾಯಕವಾಡ, ಸಾ॥ ಮರಾಠಿ ವಿಧ್ಯಾಲಯ ಹತ್ತಿರ ದರಬಾರಗಲ್ಲಿ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 17.06,2021 ರಂದು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.